## ಕಳೆದ ಸಂಚಿಕೆಯಲ್ಲಿ



ಇಬ್ಬರು ಹಿರಿಯ ಪೊಲೀಸ್ ಅಧಿಕಾರಿಗಳು ಮಾಯಣ್ಣನ ಠಾಣೆಗೆ ಬಂದು ಅಮ್ಮುವಿನ ಕೊಲೆಯ ತನಿಖೆಯ ಪ್ರಗತಿಯನ್ನು ಪರಿಶೀಲಿಸಿದರು. ಇದರಿಂದಾಗಿ ಕೊಲೆಗಾರನ ಕಂಡುಹಿಡಿಯುವ ಬಗ್ಗೆ ಮಾಯಣ್ಣನ ಮೇಲಿದ್ದ ಒತ್ತಡ ಮತ್ತಷ್ಟು ಹೆಚ್ಚಾಯಿತು. ಹಿರಿಯ ಅಧಿಕಾರಿಗಳ ತನಿಖೆಯ ನಂತರ ಮಾಯಣ್ಣ ಮತ್ತಷ್ಟು ಚುರುಕಾದ. ತನಿಖೆಯ ನಡುವೆಯೇ ಹೆಂಡತಿಯ ಕರೆ ಬಂದು, ಕಟ್ಟಲಿರುವ ಮನೆಗೆ ಬೇಗನೆ ಪ್ಲಾನ್ ಹಾಕಿಸಿ, ವಿಜಯದಶಮಿಗೆ ಗುದ್ದಲಿಪೂಜೆ ಮಾಡಿಸುವಂತೆ ಒತ್ತಾಯಿಸಿದಳು. ಹೆಂಡತಿಯ ಮಾತನ್ನು ಗಂಭೀರವಾಗಿ ತೆಗೆದುಕೊಳ್ಳದ ಮಾಯಣ್ಣ ಇದ್ದಕ್ಕಿದ್ದಂತೆ ಯಾರಿಗೂ ಹೇಳದೆ ಎರಡು ದಿನಗಳ ಕಾಲ ಕಣ್ಮರೆಯಾದ. ಅಜ್ಞಾತವಾಸದ ನಂತರ ಮರಳಿದ ಆತ, ಅಮ್ಮು ಕೊಲೆ ತನಿಖೆ ಕೊನೆಗೊಂಡಿದೆ ಎಂದು ಘೋಷಿಸಿದಾಗ ಎಲ್ಲರಿಗೂ ಅಚ್ಚರಿ. ಮರುದಿನ ಎಸ್‌ಪಿ. ಸಾಹೇಬರನ್ನು ಠಾಣೆಗೆ ಕರೆಸಿಕೊಂಡ ಮಾಯಣ್ಣ, ಅವರ ಎದುರು ಎಲ್ಲ ಆರೋಪಿಗಳನ್ನು ಹಾಜರಿಪಡಿಸಿದ. ಈ ಆರೋಪಿಗಳಲ್ಲಿ ಕೊಲೆ ಮಾಡಿದವರು ಯಾರು ಎನ್ನುವ ಕುತೂಹಲ ಎಸ್‌ಪಿ. ಸಾಹೇಬರು ಸೇರಿದಂತೆ ಎಲ್ಲರನ್ನೂ ಕಾಡತೊಡಗಿತು.

'ನಡಿಗೆಯ ನಂತರ ರಸ್ತೆ ತುದಿಯ ಪುತ್ತೂರು ಭಟ್ಟರ ಪೆಟ್ಟಿಗೆ ಅಂಗಡಿಯ ಪಕ್ಕದ ಗುಬ್ಬಿ ಮರದ ಕಟ್ಟೆಯ ಮೇಲೆ ಕುಳಿತು, ಅರ್ಧ ಗಂಟೆ ಪೇಪರ್ ಓದುತ್ತಾ, ಚಹಾ ಕುಡಿದಿದ್ದಾನೆ... ಇವೆಲ್ಲಾ ದೃಢೀಕೃತ ಅಂಶಗಳೇ'.

'ಅಲ್ಲಿಗೆ ಉಳಿದಿದ್ದು ಆ ಹೆಂಗಸು ಜಾಹ್ನವಿ, ಅಲ್ಲವೆ ಮಾಯಣ್ಣ?' ಎಸ್‌ಪಿ ಸಾಹೇಬರ ಪ್ರಶ್ನೆ.

'ಸರ್, ನೇರವಾಗಿ ತಾವೇ ಕೊಲೆ ಮಾಡಿಲ್ಲ ಅಂದರೆ ಯಾರಾದರೂ ಬಾಡಿಗೆ ಹಂತಕನಿಗೆ ಹಣ ಕೊಟ್ಟು ಕೊಲೆ ಮಾಡಿಸಿಲ್ಲ ಎಂದೇನಿಲ್ಲವಲ್ಲ ಸಾರ್?'

'ಯು ಆರ್ ರೈಟ್'.

'ಸರ್... ಜಾಹ್ನವಿಯವರ ಬ್ಯಾಂಕ್ ಖಾತೆಯಿಂದ ದುಬೈನಲ್ಲಿ ಕೆಲಸ ಮಾಡ್ತಿರೊ ಆಕೆಯ ಎಕ್ಸ್ ರೌಡಿ ಕಸಿನ್ ವೇಣುಗೆ, ಈ ತಿಂಗಳಲ್ಲಿ ಏಳು ಲಕ್ಷ ವರ್ಗಾವಣೆ ಆಗಿರೋದು ನಿಜ. ಅಂತೆಯೇ ವೇಣು ತದನಂತರ, ಅಲ್ಲಿಂದಲೇ, ಒಂದು ವಾರದೊಳಗೆ ನಮ್ಮ ಪಕ್ಕದ ಜುರಿಸ್‌ಡಿಕ್ಷನ್‌ನ ಸುಪಾರಿ ಕಿಲ್ಲರ್ ಲೋಗನಾಥನ್ ತಮ್ಮನ ಖಾತೆಗೆ, ನಾಲ್ಕು ಲಕ್ಷ ವರ್ಗಾವಣೆ ಮಾಡಿರೋದು ನಿಜ. ಆದರೆ ಅದು ವೇಣುಗೆ ಸೇರಿದ, ಶ್ರೀರಾಮಪುರಂನಲ್ಲಿನ ಒಂದು ಚಿಕ್ಕ ಮನೇನ ಲೋಗನಾಥನ್ ಅವರ ತಮ್ಮ ವಿಶ್ವನಾತನ್ ಭೋಗ್ಯಕ್ಕೆ ಹಾಕಿಕೊಂಡಿದ್ದು, ನಂತರ ರೀಸೆಂಟಾಗಿ ಮನೆ ಖಾಲಿ ಮಾಡಿದ್ದಾನೆ. ವೇಣು ಆ ಭೋಗ್ಯದ ದುಡ್ಡು ಹಿಂತಿರುಗಿಸಿದ್ದಾನೆ ಅಷ್ಟೇ. ಇನ್ನು ಲೋಗನಾಥನ್ ಸಾವಿಗೆ ವಿಶೇಷ ಅರ್ಥ ಏನಿಲ್ಲ. ಇನ್ನೊಬ್ಬ ಕುಡುಕ ಯಾರೊ, ರಸ್ತೆ ಮಧ್ಯದಲ್ಲಿ ಹೋಗುತ್ತಿದ್ದ ಇವನ ಮೇಲೆ ಕಾರ್ ಹತ್ತುಸ್ಕೊಂಡು ಹೋಗಿದ್ದಾನೆ ಅಷ್ಟೇ. ಆ ಹಿಟ್ ಅಂಡ್ ರನ್ ಕೇಸ್ ಆಗಲೇ ಪಕ್ಕದ ಸ್ಟೇಷನ್ನಿನಲ್ಲಿ ಸಾಲ್ವ್ ಆಗಿದೆ. ಜಾಹ್ನವಿಯವರು, ಅಮ್ಮು ಕೊಲೆ ಕೇಸಿನಲ್ಲಿ ಇನ್ವಾಲ್ವ್ ಆಗಿಲ್ಲ ಸರ್'.

ಎಸ್.ಪಿ. ಸಾಹೇಬರ ಸಹನೆಯು ಕೊನೆ ಮುಟ್ಟಿತ್ತು.

'ರೀ ಮಾಯಣ್ಣ... ಬೆಟ್ಟ ಅಗೆದು ಇಲಿ ಹಿಡುದ್ರು ಅನ್ನೋ ಗಾದೆ ಇದೆ. ನೀವು ನೋಡುದ್ರೆ ಸೊಳ್ಳೆನೂ ಹೊಡಿಲಿಲ್ವಲ್ರೀ'.

'ಸರ್, ಕೊಲೆ ಮಾಡಲು ಇಷ್ಟೆಲ್ಲಾ ಬಲವಾದ ಕಾರಣಗಳಿಟ್ಟುಕೊಂಡಿರೋ ಇವರೆಲ್ಲ ಸ್ವಾಭಾವಿಕವಾಗಿಯೇ ಶಂಕಿತರು. ಅಂದಮೇಲೆ ಇವರು ಈ ಕೊಲೆ ಪ್ರಕರಣದಲ್ಲಿ ನೇರ ಅಪರಾಧಿಗಳೊ, ನಿರಪರಾಧಿಗಳೊ ಅಥವಾ ಪರೋಕ್ಷವಾಗಿ ಬೇರೆ ಯಾವ ರೀತಿಯಲ್ಲಿ ಭಾಗಿಯಾಗಿದ್ದಾರೊ ತನಿಖೆ ಮಾಡಬೇಕು ಅಲ್ಲವೇ ಸಾರ್...'

ಮಾಯಣ್ಣನ ಉತ್ತರದಿಂದ ಎಸ್.ಪಿ. ಸಾಹೇಬರಿಗೆ ಇನ್ನಷ್ಟು ರೇಗಿತ್ತು.

'ರೀ ಮಾಯಣ್ಣ, ಕೊಲೆಗಾರ ಯಾರು ಅನ್ನೋದು ಮುಖ್ಯ. ಸಾಕ್ಷಿ ಪುರಾವೆಗಳ ಸಮೇತ ಐಡೆಂಟಿಫೈ ಮಾಡಿದ್ದೀರಾ ಇಲ್ಲವಾ, ಅಷ್ಟು ಹೇಳಿ'.

'ಸರ್, ನಾನು ಆಗಲೇ ಹೇಳಿದಂತೆ ತನಿಖೆ ತೊಂಬತ್ತೊಂಬತ್ತು ಪರ್ಸೆಂಟ್ ಮುಗಿದಿದೆ. ನಾನು ಈಗ ಅಪರಾಧ ವಿಧಿವಿಧಾನ ಪ್ರಯೋಗಾಲಯದಿಂದ ಒಂದು ಅಂತಿಮ, ಅಲ್ಲಗೆಳೆಯಲಾಗದ, ನಿರ್ಣಾಯಕ ಸಾಕ್ಷಿಗಾಗಿ ಕಾಯ್ತಾಯಿದ್ದೀನಿ ಸರ್. ಅದು ಇನ್ನು ಹತ್ತು ನಿಮಿಷದಲ್ಲಿ ಇಮೇಲ್‌ನಲ್ಲಿ ಬರಲಿದೆ. ಆಗ ನಾನು ಕೊಲೆಗಾರನನ್ನ ಘೋಷಣೆ ಮಾಡ್ತೀನಿ. ಸದ್ಯಕ್ಕೆ ಕೊಲೆಗಾರನನ್ನು ಆಗಲೇ ವಶಕ್ಕೆ ತೆಗೆದುಕೊಂಡು ನಮ್ಮ ಪೀಸಿ ಭುಜಂಗನ ಕಾವಲಿನಲ್ಲಿಟ್ಟಿದ್ದೇನೆ'.

ಇದ್ದಕ್ಕಿದ್ದಂತೆ ಇಡೀ ಕೋಣೆಯಲ್ಲಿ ಭಾರೀ ವಿದ್ಯುತ್ ಸಂಚಾರವಾದಂತಿತ್ತು. ವಿನಯ್ ಮತ್ತು ಕುಮಾರ್ ಹೊರತು ಮಿಕ್ಕೆಲ್ಲರ ಊಹೆ–ಕಲ್ಪನೆಗಳು, ಕಡಿವಾಣ ಕಳಚಿಕೊಂಡ ಹುಚ್ಚು ಕುದುರೆಯಂತೆ ಎತ್ತೆತ್ತಲೊ ನೆಗೆದಾಡುತ್ತಿದ್ದವು. ಇನ್ಯಾರಿರಬಹುದೆಂದು ಠಾಣೆಯ ಪೇದೆಗಳ ಮಧ್ಯೆ ಮೆಲ್ಲಗೆ ಗುಸು ಗುಸು ಚರ್ಚೆ ನಡೆದಿತ್ತು.

ಫೋರೆನ್ಸಿಕ್ ಲ್ಯಾಬಿಂದ ಕನ್‌ಫರ್ಮೇಷನ್ ಬರೋ ತನಕ ಅಮ್ಮುವಿನ ಹಂತಕನ ಗುರುತನ್ನು ಹಿಡಿದಿಟ್ಟಿರಲು ತೀರ್ಮಾನಿಸಿದ್ದ ಮಾಯಣ್ಣ, ತನ್ನ ಮೊಬೈಲಲ್ಲಿ ಕಾತರದಿಂದ ಆ ಇಮೇಲ್ ನಿರೀಕ್ಷಿಸುತ್ತಿದ್ದ. ಅದು ಸ್ವಲ್ಪ ಹೊತ್ತಿನಲ್ಲೇ ಬಂದಿತ್ತು ಕೂಡ. ಅವನ ಎಣಿಕೆಯಂತೆ, ಅವನ ತನಿಖೆಯನ್ನು ದೃಢಪಡಿಸಿ, ದಡ ಮುಟ್ಟಿಸಿದಂತೆ, ಯಾವುದೇ ನ್ಯಾಯಾಲಯ ಅಲ್ಲಗೆಳೆಯಲಾಗದಂತೆ ಬಂದಿತ್ತು, ಆ ಪ್ರಯೋಗಾಲಯದ ವರದಿ. ಅದೇ ನೇಲ್ ಕಟ್ಟರ್... ಹಿಡಿಯಲ್ಲಿ, ಕೊಲೆಯಾದ ಅಮ್ಮುವಿನ ಬೆರಳಚ್ಚು ಮತ್ತು ಕ್ಯಾನ್ ಓಪನರಿನ ಚೂಪಾದ ಮೊನೆಯಿಂದಾದ ರಕ್ತದ ಕಲೆಯಿಂದ ಗುರುತಿಸಿದ್ದರೆ, ಅಮ್ಮು ತನ್ನ ಅಂತಿಮ ಕ್ಷಣಗಳಲ್ಲಿ ಆತ್ಮರಕ್ಷಣೆಗಾಗಿ ಬಳಸಿದ ಅದರ ಇನ್ನೊಂದು ತುದಿಯಲ್ಲಿನ ತೆರೆದ ಚಿಕ್ಕ ಕತ್ತಿಯ ಮೇಲಿನ ರಕ್ತದ ಕಲೆ, ಹಂತಕನನ್ನು ಗುರುತಿಸಿತ್ತು. ಮಾಯಣ್ಣನ ಮುಖದಲ್ಲಿ ಗೆಲುವಿನ, ಸಫಲತೆಯ ಭಾವ ತುಂಬಿಕೊಂಡಿತ್ತು. ಮಾಯಣ್ಣ ತಕ್ಷಣ ಭುಜಂಗನಿಗೆ ಕರೆ ಮಾಡಿ ಕೊಲೆಗಾರನನ್ನ ಕರೆ ತರುವಂತೆ ಹೇಳಲು ಎಲ್ಲರ ದೃಷ್ಟಿಯು ಬಾಗಿಲ ಕಡೆ ನೆಟ್ಟಿತ್ತು. ಕೆಲವೇ ಕ್ಷಣಗಳಲ್ಲಿ ಭುಜಂಗನು ಕತ್ತಿನ ಪಟ್ಟಿಹಿಡಿದು ಎಳೆತಂದಿದ್ದು – ಮುರುಗನ್‌ನನ್ನು. ವಿನಯ್ ಮತ್ತು ಕುಮಾರನ ಹೊರತು ಠಾಣೆಯ ಎಲ್ಲಾ ಸಿಬ್ಬಂದಿಗಳ ಮನಸ್ಸಿನಲ್ಲಿ ಆಶ್ಚರ್ಯದ ಜೊತೆ ಜೊತೆಗೆ, ನಿರಾಳ, ನೆಮ್ಮದಿಯ ಭಾವ ಆವರಿಸಿತ್ತು. ನಡುನಡುವೆಯೇ ಎಲ್ಲಾ ತರದ ಲೆಕ್ಕಾಚಾರ, ಮರು ಲೆಕ್ಕಾಚಾರಗಳು ಶುರುವಾಗಿದ್ದವು.

ಮಾಯಣ್ಣ, ಎಸ್‌ಪಿ ಸಾಹೇಬರ ಕಡೆ ತಿರುಗಿ, 'ಸರ್, ಕಳೆದ ನಾಲ್ಕು ದಿನಗಳಲ್ಲಿ ಈ ಘಾತುಕನ ಹಿನ್ನೆಲೆ ಮತ್ತು ಅವನ ದುಷ್ಕೃತ್ಯಗಳ ಬಗ್ಗೆ ಎಷ್ಟು ಸಾಕ್ಷಿ ಪುರಾವೆಗಳನ್ನು ಸೇರಿಸಿದ್ದೇನೆ. ಅಂದರೆ, ಇವನು ಯಾವ ನ್ಯಾಯಾಲಯದಿಂದಲೂ ಶಿಕ್ಷೆಯಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಹಾಗೇನಾದರೂ ಆದರೆ ನಾನು ಇನ್ಯಾವತ್ತೂ ಈ ಯೂನಿಫಾರ್ಮ್ ಹಾಕೋದಿಲ್ಲ ಸರ್'.

ಮಾಯಣ್ಣನ ಆತ್ಮವಿಶ್ವಾಸ, ಕಾರ್ಯತತ್ಪರತೆ, ಬದ್ಧತೆ, ಕ್ಷಮತೆಗಳನ್ನು ಕಂಡು ಸಕಲರಿಗೂ ಅವನ ಮೇಲಿನ ಅಭಿಮಾನ ಮತ್ತು ಗೌರವಗಳು ಇಮ್ಮಡಿಯಾಗಿತ್ತು. ಮೊದಲಿಗೆ ಎಸ್‌ಪಿ ಸಾಹೇಬರು ಕುರ್ಚಿಯಿಂದ ಎದ್ದು ಬಂದು ಮಾಯಣ್ಣನ ಕೈಕುಲುಕಿ ಅಭಿನಂದಿಸಿದರು. ನಂತರ ಎಲ್ಲರನ್ನು ಕುರಿತು,

'ಠಾಣೆಯ ಎಲ್ಲಾ ಸಿಬ್ಬಂದಿಗಳಿಗೆ ನನ್ನ ಕಡೆಯಿಂದ ಒಂದು ತಿಂಡಿ ಕಾಫಿ ಆಗಲಿ. ನಿಮ್ಮೆಲ್ಲರ ಏಕಾಗ್ರತೆ ಮತ್ತು ಪರಿಶ್ರಮಗಳ ಶ್ಲಾಘನೆಗಾಗಿ'.

ಸಜ್ಜನಿಕೆಯು, ಸಂಕುಚಿತತೆಯನ್ನು ಹಣಿದಿತ್ತು. ಎಲ್ಲರೂ ಸಂಪನ್ನ ಭಾವದಿಂದ ಚಪ್ಪಾಳೆ ತಟ್ಟಿದ್ದರು.

'ಮಾಯಣ್ಣ, ನಿಮ್ಮ ತನಿಖೆ ಒಂದು ಘಟ್ಟದ ನಂತರ ಕವಲೊಡೆದು ಇನ್ನೊಂದು ದಿಕ್ಕಿಗೆ ತಿರುಗಿ ಇಲ್ಲಿಗೆ ಬಂದು ನಿಂತಿದೆ. ನೀವು ಇದನ್ನು ಎಲ್ಲಾ